


بسم اللهِ الرّحمٰن الرّحيم

# ಬದ್ರ್ ಯುದ್ಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07-07-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಖುತ್ಬದಲ್ಲಿ ಸತ್ಯನಿಷೇಧಿಗಳಿಗೆ ಮುಸ್ಲಿಮರ ಬಗ್ಗೆ ಉಂಟಾದ ಭಯ ಹಾಗೂ ಅಬೂಜಹಲ್ ಮತ್ತು ಉತ್ಬ ನಡುವೆ ಯುದ್ಧದ ವಿಷಯದಲ್ಲಿ ಉಂಟಾಗಿದ್ದ ಭಿನ್ನಾಬಿಪ್ರಾಯದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಅನಂತರ ಅಬೂಜಹಲಿನ ಚುಚ್ಚುಮಾತಿನ ಕಾರಣದಿಂದ ಉತ್ಬ ಯುದ್ಧದ ಘೋಷಣೆ ಕೂಡ ಮಾಡಿದನು. ಹೀಗೆ ಯುದ್ಧ ಶುರುವಾಯಿತು.

ಉತ್ಬ ಬಿನ್ ರಬೀಅ ತನ್ನ ಸಹೋದರ ಶೈಬ ಬಿನ್ ರಬೀಅ ಮತ್ತು ತನ್ನ ಮಗನಾದ ವಲೀದ್ ಬಿನ್ ಉತ್ಬನ ಮಧ್ಯದಲ್ಲಿ ನಡೆದುಕೊಂಡು ಪಂಕ್ತಿಗಳಿಂದ ಮುಂದಕ್ಕೆ ಹೋಗಿ ಮುಸ್ಲಿಮರನ್ನು ಸೆಣೆಸಾಡಲು ಆಹ್ವಾನಿಸಿದನು. ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಅನ್ಸಾರಿನ ಕೆಲವು ಯುವಕರು ಉತ್ಬರಿಗೆ ಉತ್ತರಿಸಿದಾಗ, ನೀವು ಯಾರು ಎಂದು ಆತನು ಕೇಳಿದನು. ಯಾರೆಂದು ಹೇಳಲಾದಾಗ ಆತನು ಹೇಳಿದನು: ನಮಗೆ ನಿಮ್ಮೊಂದಿಗೆ ಯಾವುದೇ ಕೆಲಸವಿಲ್ಲ. ನಮ್ಮ ಉದ್ದೇಶ ನಮ್ಮ ಚಿಕ್ಕಪ್ಪ ಮತ್ತು ದೊಡ್ಡಪ್ಪರ ಮಕ್ಕಳೊಂದಿಗೆ ಹೋರಾಡುವುದಾಗಿದೆ. ಅನಂತರ ಉಚ್ಚ ಸ್ವರದಲ್ಲಿ ಹೀಗೆ ಹೇಳಿದನು: ಹೇ ಮುಹಮ್ಮದ್, (ಸಲ್ಲಲ್ಲಾಹು ಅಲೈಹಿ ವಸಲ್ಲಂ) ನಮ್ಮ ಸಂಬಂಧಿಕರಲ್ಲಿ ನಮಗೆ ಸಮಾನರಾಗಿರುವ ಜನರನ್ನು ನಮ್ಮ ಎದುರಾಗಿ ಕಳುಹಿಸು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಎದ್ದೇಳಿರಿ ಹಂಝ, ಎದ್ದೇಳಿರಿ ಅಲಿ, ಎದ್ದೇಳಿರಿ ಉಬೈದ ಬಿನ್ ಹಾರಿಸ್. (ಹಝ್ರತ್ ಹಂಝ(ರ) ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪ ಹಾಗೂ ಮತ್ತಿಬ್ಬರು ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪನ ಮಕ್ಕಳಾಗಿದ್ದರು.) ಹಂಝ(ರ) ಉತ್ಬನ ಕಡೆಗೆ ಧಾವಿಸಿದರು. ಹಝ್ರತ್ ಅಲಿ(ರ) ಶೈಬನ ಕಡೆಗೆ ಧಾವಿಸಿದರು. ಉಬೈದ ಮತ್ತು ವಲೀದ್‌ನ ನಡುವೆ ಸ್ವಲ್ಪ ಕಾದಾಟ ನಡೆಯಿತು ಮತ್ತು ಇಬ್ಬರೂ ಪರಸ್ಪರ ಗಾಯಗೊಳಿಸಿ ಬಲಹೀನಗೊಳಿಸಿದರು. ಅನಂತರ ನಾವು ವಲೀದ್‌ನ ಕಡೆಗೆ ಹೋದೆವು ಮತ್ತು ಆತನನ್ನು ವಧಿಸಿದೆವು. ಉಬೈದರನ್ನು ನಾವು ಎತ್ತಿ ತಂದೆವು. ಹಂಝ(ರ) ಮತ್ತು ಅಲಿ(ರ) ತಮ್ಮ ಎದುರಾಳಿಗಳನ್ನು ವಧಿಸಿದರು.

ಹಝ್ರತ್ ಹಂಝ(ರ) ಮತ್ತು ಹಝ್ರತ್ ಅಲಿ(ರ) ತಮ್ಮ ಸಂಗಡಿಗ ಉಬೈದ ಬಿನ್ ಹಾರಿಸ್(ರ)ರನ್ನು ತಮ್ಮ ಸೈನ್ಯಕ್ಕೆ ಎತ್ತಿ ತಂದರು. ಅವರ ಒಂದು ಕಾಲು ತುಂಡರಿಸಲ್ಪಟ್ಟಿತ್ತು. ಅವರನ್ನು ಹಝ್ರತ್ ಪೈಗಂಬರ್(ಸ)ರ ಮುಂದೆ ತಂದಾಗ, ಅವರು ಕೇಳಿದರು: ಯಾ ರಸೂಲಲ್ಲಾಹ್, ನಾನು ಶಹೀದ್ ಅಲ್ಲವೇ? ನಿಸ್ಸಂಶಯವಾಗಿಯೂ ಶಹೀದ್ ಆಗಿರುವಿರಿ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಗಾಯದ ಕಾರಣದಿಂದ ಉಬೈದ ಬಿನ್ ಹಾರಿಸ್(ರ)ರ ಜೀವ ಉಳಿಯಲಿಲ್ಲ. ಬದ್ರ್‌ನಿಂದ ಮರಳಿ ಬರುವಾಗ ಮಾರ್ಗಮಧ್ಯದಲ್ಲಿ ಅವರು ಮೃತಪಟ್ಟರು.

ಉಭಯ ಸೈನ್ಯಗಳ ನಡುವೆ ಘೋರವಾದ ಯುದ್ಧ ನಡೆಯಲು ಆರಂಭವಾದಾಗ ಅಬೂಜಹಲ್ ಹೀಗೆ ದುಆ ಮಾಡಿದನು: ಯಾವ ವ್ಯಕ್ತಿ ನಿಕಟ ಸಂಬಂಧಗಳನ್ನು ಮುರಿಯುತ್ತಾನೋ ಮತ್ತು ನಾವು ಹಿಂದೆಂದೂ ಕೇಳಿರದ ಮಾತುಗಳನ್ನು ಹೇಳುತ್ತಾನೋ ಅಂಥವನನ್ನು ಇಂದು ನಾಶಮಾಡು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಜೀವಿತ ಪವಿತ್ರವಲ್ಲವೆಂದು ಅಬೂಜಹಲ್ ದೃಢವಾಗಿ ನಂಬಿದ್ದನು ಎಂದು ತೋರುತ್ತದೆ – ನಊಧುಬಿಲ್ಲಾಹ್. ಆದ್ದರಿಂದಲೇ ಅವನು ನೋವಿನೊಂದಿಗೆ ಹೀಗೆ ಪ್ರಾರ್ಥನೆ ಮಾಡಿದ್ದನು. ಆದರೆ ಆ ದುಆ ಮಾಡಿದ ಒಂದು ಗಂಟೆಯೊಳಗೆ ಅಲ್ಲಾಹನ ಶಿಕ್ಷೆ ಅವನ ಮೇಲೆ ಬಂದೆರಗಿತು. ಅವನ ತಲೆಯನ್ನು ಕತ್ತರಿಸಿ ಎಸೆಯಲಾಯಿತು. ಆತನು ಯಾರ ಪರಿಶುದ್ಧ ಜೀವಿತವನ್ನು ಕಳಂಕಿತವೆಂದು ಹೇಳುತ್ತಿದ್ದನೋ ಅವರು ಯುದ್ಧ ಮೈದಾನದಲ್ಲಿ ವಿಜಯ ಮತ್ತು ಯಶಸ್ಸಿನೊಂದಿಗೆ ಮರಳಿ ಬಂದರು.

ಮುಸ್ಲಿಮರ ಮುಂದೆ ಅವರಿಗಿಂತ ಮೂರು ಪಟ್ಟು ಅಧಿಕ ದೊಡ್ಡದಾದ ಸಂಘವು ಎಲ್ಲ ವಿಧದ ಯುದ್ಧ ಸಾಮಾನುಗಳೊಂದಿಗೆ ಇಸ್ಲಾಮಿನ ಹೆಸರು ಮತ್ತು ಕುರುಹನ್ನು ಅಳಿಸಿ ಹಾಕುವ ನಿರ್ಧಾರದಿಂದ ಮೈದಾನಕ್ಕೆ ಹೊರಟಿದ್ದರು. ಮುಸ್ಲಿಮರ ಸಂಖ್ಯೆ ಬಹಳ ಕಡಿಮೆಯಾಗಿತ್ತು. ಆದರೆ ಜೀವಂತವಾದ ವಿಶ್ವಾಸವು ಅವರೊಳಗೆ ಒಂದು ಅಸಾಧಾರಣವಾದ ಶಕ್ತಿಯನ್ನು ತುಂಬಿಸಿತ್ತು. ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಸ್ವತಂತ್ರಗೊಳಿಸಿದ್ದ ಗುಲಾಮನಾದ ಹಝ್ರತ್ ಮುಹ್‌ಜರನ್ನು ಶತ್ರುಗಳು ಬಾಣಕ್ಕೆ ಗುರಿಪಡಿಸಿ ಶಹೀದ್ ಮಾಡಿದರು. ಇವರು ಮುಸ್ಲಿಮರ ಮೊದಲ ಶಹೀದ್ ಆಗಿದ್ದರು.

ಹಝ್ರತ್ ಪೈಗಂಬರ್(ಸ) ಹೇಳಿದರು: ಇಂದು ಯಾರು ಸಹನೆಯೊಂದಿಗೆ ಸತ್ಕರ್ಮವೆಂದು ಅರಿತುಕೊಂಡು ಯುದ್ಧ ಮಾಡುವರೋ ಮತ್ತು ಬೆನ್ನು ತಿರುಗಿಸಿ ಓಡದೇ ಇರುವರೋ ಅವರನ್ನು ಅಲ್ಲಾಹನು ಸ್ವರ್ಗದಲ್ಲಿ ಪ್ರವೇಶಗೊಳಿಸುವನು. ಇದನ್ನು ಆಲಿಸಿಕೊಂಡು ಖರ್ಜೂರವನ್ನು ತಿನ್ನುತ್ತಿದ್ದ ಬನೀ ಸಲ್ಮಾ

ಗೋತ್ರದ ಝುಬೇರ್ ಬಿನ್ ಹಮ್ಮಾಮ್ ತನ್ನ ಖಡ್ಗವನ್ನು ಎತ್ತಿಕೊಂಡು ಯುದ್ಧ ಮಾಡಲು ಹೊರಟರು ಮತ್ತು ಶಹೀದ್ ಆದರು. ಅಫ್ರಾರ ಮಗನಾದ ಔಫ್ ಬಿನ್ ಹಾರಿಸ್(ರ) ಹಝ್ರತ್ ಪೈಗಂಬರ್(ಸ)ರೊಂದಿಗೆ ಕೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನು ತನ್ನ ದಾಸನ ಯಾವ ಕೆಲಸದಿಂದ ಸಂತುಷ್ಟನಾಗುತ್ತಾನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಯುದ್ಧ ವಸ್ತ್ರವನ್ನು ಧರಿಸದೇ ಶತ್ರುಗಳನ್ನು ವಧಿಸಿದರೆ! ಆಗ ಅವರು ತನ್ನ ಯುದ್ಧ ವಸ್ತ್ರವನ್ನು ಕಳಚಿ ಎಸೆದರು ಮತ್ತು ಅನೇಕ ಸತ್ಯನಿಷೇಧಿಗಳನ್ನು ವಧಿಸಿದ ನಂತರ ಸ್ವತಃ ಹುತಾತ್ಮರಾದರು.

ಯುದ್ಧ ಕೊನೆಗೊಂಡಾಗ ಹಝ್ರತ್ ಪೈಗಂಬರ್(ಸ) ಕೊಲ್ಲಲ್ಪಟ್ಟವರ ಮಧ್ಯೆ ನಿಂತುಕೊಂಡು ಅಬೂಜಹಲನ್ನು ಹುಡುಕಲು ತೊಡಗಿದರು. ಅವನನ್ನು ಕಾಣದೇ ಇದ್ದಾಗ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: اَللّٰهُمَّ لَا تُعْجِزْنِيْ فِرْعَوْنَ هٰذِهِ الْأُمَّةِ ಎಂದರೆ, ಹೇ ಅಲ್ಲಾಹ್, ಈ ಸಮುದಾಯದ ಫಿರ್‌ಔನಿನ ಮುಂದೆ ನನ್ನನ್ನು ಅಪಮಾನಿಸಬೇಡ. ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಆತನನ್ನು ಹಝ್ರತ್ ಪೈಗಂಬರ್(ಸ) ಹೇಳಿದ ಪ್ರಕಾರ ಮಂಡಿಯಲ್ಲಿ ಆಗಿದ್ದ ಗಾಯದ ಗುರುತಿನಿಂದ ಕಂಡು ಹಿಡಿದರು. ಆತನಲ್ಲಿ ಸ್ವಲ್ಪ ಜೀವದ ಕಳೆ ಉಳಿದಿತ್ತು. ಆತನೊಡನೆ ಕೊನೆಯ ಬಯಕೆ ಏನೆಂದು ಕೇಳಿದಾಗ, ತನ್ನ ಕತ್ತನ್ನು ಉದ್ದವಾಗಿ ಕತ್ತರಿಸಬೇಕು ಎಂದು ಹೇಳಿದನು. ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಹೇಳಿದರು: ನಾನು ನಿನ್ನ ಈ ಕೊನೆಯ ಬಯಕೆ ಕೂಡ ಈಡೇರಲು ಬಿಡಲಾರೆನು. ಅವರು ಆತನ ತಲೆಯನ್ನು ಗಲ್ಲದ ಸಮೀಪವಾಗಿ ಕತ್ತರಿಸಿಕೊಂಡು ಹಝ್ರತ್ ಪೈಗಂಬರ್(ಸ)ರ ಕಾಲಿನ ಸಮೀಪ ಅದನ್ನು ಎಸೆದರು. ಆಗ ಹಝ್ರತ್ ಪೈಗಂಬರ್(ಸ) ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ಹೀಗೆ ಹೇಳಿದರು: اَللّٰهُ الَّذِيْ لَا إِلٰهَ غَيْرُهُ ಎಂದರೆ, ಅಲ್ಲಾಹನು ಪರಿಶುದ್ಧನು. ಅವನಲ್ಲದೇ ಬೇರೆ ಆರಾಧ್ಯನಿಲ್ಲ.

ಹಝ್ರತ್ ಪೈಗಂಬರ್(ಸ) ಹೀಗೆಯೂ ದುಆ ಮಾಡಿದ್ದಾಗಿ ಮತ್ತೊಂದು ವರದಿಯಲ್ಲಿ ಬಂದಿದೆ: ಹೇ ಅಲ್ಲಾಹ್, ಆತನು ನಿನ್ನ ಹಿಡಿತದಿಂದ ತಪ್ಪಿಸಿ ಹೋಗುವಂತೆ ಆಗದಿರಲಿ. ಹಝ್ರತ್ ಖತಾದ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು – ಪ್ರತಿಯೊಂದು ಸಮುದಾಯದಲ್ಲೂ ಫಿರ್‌ಔನ್ ಇರುತ್ತಾನೆ. ಈ ಉಮ್ಮತಿನ ಫಿರ್‌ಔನ್ ಅಬೂಜಹಲ್ ಆಗಿರುವನು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಬೂಜಹಲನನ್ನು ಫಿರ್‌ಔನ್ ಎಂದು ಹೇಳಲಾಗಿದೆ. ಆದರೆ ನನ್ನ ಪ್ರಕಾರ ಆತನು ಫಿರ್‌ಔನಿಗಿಂತ ಒಂದು ಪಟ್ಟು ಮೇಲೆ ಇದ್ದನು. ಫಿರ್‌ಔನ್ ಆದರೋ ಕೊನೆಗೆ ಹೀಗೆ ಹೇಳಿದ್ದನು: اٰمَنْتُ أَنَّهُ لَا إِلٰهَ إِلَّا الَّذِيْ اٰمَنَتْ بِهِ بَنُوْا إِسْرَآءِيْلَ ಬನೀ ಇಸ್ರಾಈಲರು ನಂಬುವ ದೇವನಲ್ಲದೇ ಬೇರೆ ಆರಾಧ್ಯನಿಲ್ಲವೆಂದು ನಾನು ನಂಬುತ್ತೇನೆ. ಆದರೆ ಅಬೂಜಹಲ್ ಕೊನೆಯ ತನಕ ವಿಶ್ವಾಸ ಹೊಂದಲಿಲ್ಲ. ಮಕ್ಕದಲ್ಲಿ ಎಲ್ಲ ಕಲಹಕ್ಕೂ ಕಾರಣಕರ್ತ ಆತನೇ ಆಗಿದ್ದನು. ಬಹಳ ಅಹಂಕಾರಿ ಹಾಗೂ ಸ್ಥಾನಮಾನಗಳನ್ನು ಬಯಸುತ್ತಿದ್ದ ವ್ಯಕ್ತಿಯಾಗಿದ್ದನು.

ಸೂರ ಅನ್ಫಾಲಿನ وَمَا رَمَيْتَ إِذْ رَمَيْتَ وَلٰكِنَّ اللّٰهَ رَمٰى ಎಂಬ ವಚನವನ್ನು ವ್ಯಾಖ್ಯಾನಿಸುತ್ತಾ ಇಮಾಂ ರಾಝಿ ಬರೆಯುತ್ತಾರೆ: ಖುರೈಶಿಯರು ದಾಳಿ ಪ್ರಾರಂಭಿಸಿದಾಗ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಈ ಖುರೈಶ್ ಗೋತ್ರ ತಮ್ಮ ಕುದುರೆಗಳೊಂದಿಗೆ ಮತ್ತು ಸಾಮಾನುಗಳೊಂದಿಗೆ ಅಹಂಕಾರದಿಂದ ನಿನ್ನ ಪ್ರವಾದಿಯನ್ನು ನಿರಾಕರಿಸುತ್ತಾ ಬಂದಿರುವರು. ಹೇ ಅಲ್ಲಾಹ್, ನೀನು ನನಗೆ ವಾಗ್ದಾನ ಮಾಡಿದ್ದನ್ನು ನಾನು ನಿನ್ನೊಡನೆ ಬೇಡುತ್ತೇನೆ. ಆಗ ಜಿಬ್ರೀಲ್(ಅ) ಅವತೀರ್ಣಗೊಂಡು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಒಂದು ಹಿಡಿ ಮರಳನ್ನು ತೆಗೆದು ಸತ್ಯನಿಷೇಧಿಗಳ ಕಡೆಗೆ ಎಸೆಯಿರಿ. ಉಭಯ ಸೈನ್ಯಗಳು ಮುಖಾಮುಖಿಯಾದಾಗ ಹಝ್ರತ್ ಪೈಗಂಬರ್(ಸ) ಒಂದು ಹಿಡಿ ಮರಳನ್ನು ತೆಗೆದು ಸತ್ಯನಿಷೇಧಿಗಳ ಕಡೆಗೆ ಎಸೆದರು. ಆಗ ಮುಶ್ರಿಕರು ತಮ್ಮ ಕಣ್ಣುಗಳನ್ನು ಒರೆಸಲು ತೊಡಗಿದರು. ಹೀಗೆ ಅವರು ಪರಾಜಿತರಾದರು. ಅಲ್ಲಾಹನು ಹೀಗೆ ಹೇಳುತ್ತಾನೆ: وَمَا رَمَيْتَ إِذْ رَمَيْتَ وَلٰكِنَّ اللّٰهَ رَمٰى ನೀನು ಎಸೆದ ಒಂದು ಹಿಡಿ ಮರಳು ಸತ್ಯದಲ್ಲಿ ಎಸೆದದ್ದು ಅಲ್ಲಾಹನಾಗಿದ್ದನು. ಏಕೆಂದರೆ, ಹಝ್ರತ್ ಪೈಗಂಬರ್(ಸ) ಎಸೆದ ಮರಳಿನಿಂದ ಹೆಚ್ಚೆಂದರೆ ಒಬ್ಬ ವ್ಯಕ್ತಿಯ ಮೇಲೆ ಪರಿಣಾಮ ಬೀರಬಹುದಾಗಿತ್ತು. ಆದರೆ ಅಲ್ಲಾಹನು ಎಸೆದ ಕಾರಣದಿಂದ ಆ ಮಣ್ಣಿನ ಕಣಗಳು ಶತ್ರುಗಳ ಕಣ್ಣುಗಳ ಒಳಗೆ ಹೋದುವು. ಆದ್ದರಿಂದ ಇದನ್ನು ಎಸೆದದ್ದು ಹಝ್ರತ್ ಪೈಗಂಬರ್(ಸ) ಆಗಿದ್ದರೂ ಕೂಡ ಅದರ ಪರಿಣಾಮ ಅಲ್ಲಾಹನ ಕೈಯಿಂದ ನಡೆಯಿತು.

ಹಝ್ರತ್ ಜಿಬ್ರೀಲ್(ಅ) ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಕೇಳಿದರು: ಮುಸ್ಲಿಮರಲ್ಲಿ ಬದ್ರ್ ಯೋಧರಿಗೆ ನೀವು ಯಾವ ಸ್ಥಾನವನ್ನು ನೀಡುತ್ತೀರಿ? ಹಝ್ರತ್ ಪೈಗಂಬರ್(ಸ) ಹೇಳಿದರು: ಅತ್ಯುತ್ತಮ ಮುಸ್ಲಿಮರು ಅಥವಾ ಅಂತಹ ಯಾವುದೋ ಒಂದು ಪದವನ್ನು ಉಪಯೋಗಿಸಿದರು. ಆಗ ಜಿಬ್ರೀಲ್(ಅ) ಹೇಳಿದರು: ಬದ್ರ್ ಯುದ್ಧದಲ್ಲಿ ಭಾಗವಹಿಸಿದ ದೇವದೂತರು ಸಹ ಅದೇ ರೀತಿ ಶ್ರೇಷ್ಠರು.

ದೇವದೂತರ ಅವತರಣ ಎಂಬುದು ಸತ್ಯವಿಶ್ವಾಸಿಗಳಿಗಾಗಿ ಸುವಾರ್ತೆ ಮತ್ತು ಮನಸ್ಸಮಾಧಾನಕ್ಕಾಗಿ ಆಗಿತ್ತು ಎಂದೂ ಸತ್ಯದಲ್ಲಿ ದೇವದೂತರು ಯುದ್ಧದಲ್ಲಿ ಭಾಗವಹಿಸಿರಲಿಲ್ಲ ಎಂದೂ ಕೆಲವರು ಅಭಿಪ್ರಾಯ ಪಡುತ್ತಾರೆ. ಪ್ರಬಲವಾದ ಹದೀಸುಗಳಿಗೆ ಈ ಅಭಿಪ್ರಾಯ ವಿರುದ್ಧವಾಗಿದೆ. (ನಂತರ ಹುಝೂರ್ ಹೇಳಿದರು:) ಸಹಾಯಕ್ಕಾಗಿ ಒಂದೇ ದೇವದೂತ ಸಾಕಾಗಿತ್ತು, ಸಾವಿರಾರು ದೇವದೂತರ ಆವಶ್ಯಕತೆ ಏಕೆ ಎಂಬ ಸಂಶಯ ಇಲ್ಲಿ ಉದಿಸುತ್ತದೆ. ಇಮಾಂ ಇಬ್ನು ಕಸೀರ್ ಬರೆಯುತ್ತಾರೆ: ಅಲ್ಲಾಹನ ಕಡೆಯಿಂದ ದೇವದೂತರ ಅವತೀರ್ಣ ಮತ್ತು ಮುಸ್ಲಿಮರಿಗೆ

ಅದರ ಬಗ್ಗೆ ತಿಳಿಸಿದ್ದು ಸುವಾರ್ತೆ ಎಂಬ ರೀತಿಯಲ್ಲಾಗಿತ್ತು. ಸತ್ಯದಲ್ಲಿ ಅವರಿಲ್ಲದೆಯೂ ಶತ್ರುಗಳ ವಿರುದ್ಧ ಅಲ್ಲಾಹನು ಮುಸ್ಲಿಮರಿಗೆ ಸಹಾಯ ಮಾಡಬಹುದಾಗಿದೆ.

ಯುದ್ಧ ಶುರುವಾದಾಗ ಸ್ವಲ್ಪ ಸಮಯದ ನಂತರ ಮುಶ್ರಿಕರ ಸೈನ್ಯದಲ್ಲಿ ಪರಾಜಯ ಮತ್ತು ಕಳವಳದ ಲಕ್ಷಣಗಳು ಪ್ರಕಟಗೊಂಡುವು. ಅವರ ಪಂಕ್ತಿಗಳು ಮುಸ್ಲಿಮರ ಶಕ್ತವಾದ ದಾಳಿಗಳಿಂದ ಅಸ್ತವ್ಯಸ್ತಗೊಂಡುವು. ಅವರು ಪರಾರಿಯಾಗಲು ಆರಂಭಿಸಿದರು. ಮುಸ್ಲಿಮರು ಅವರನ್ನು ಹಿಂಬಾಲಿಸಿದರು ಮತ್ತು ಅವರನ್ನು ಪರಾಜಿತಗೊಳಿಸಿದರು.

ಈ ಯುದ್ಧವು ಮುಶ್ರಿಕರ ಪರಾಜಯ ಮತ್ತು ಮುಸ್ಲಿಮರ ವಿಜಯದೊಂದಿಗೆ ಮುಕ್ತಾಯಗೊಂಡಿತು. ಯುದ್ಧದಲ್ಲಿ 14 ಮುಸ್ಲಿಮರು (6 ಮುಹಾಜಿರರು ಮತ್ತು 8 ಅನ್ಸಾರರು) ಶಹೀದ್ ಆದರು. ಆದರೆ ಮುಶ್ರಿಕರಿಗೆ ಹಿರಿದಾದ ನಷ್ಟವುಂಟಾಯಿತು. ಅವರ 70 ಜನರು ವಧಿಸಲ್ಪಟ್ಟರು ಮತ್ತು 70 ಜನರು ಕೈದಿಗಳಾದರು. ಅವರಲ್ಲಿ ಅನೇಕರು ನಾಯಕರು, ಮುಖಂಡರು ಮತ್ತು ದೊಡ್ಡ ದೊಡ್ಡ ಸರದಾರರು ಇದ್ದರು.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಕೆಲವು ದುಆಗಳ ಕಡೆಗೆ ಗಮನ ಸೆಳೆಯಲು ಬಯಸುತ್ತೇನೆ. ಫೆಲಸ್ತೀನಿನ ಮುಸ್ಲಿಮರಿಗಾಗಿಯೂ ದುಆ ಮಾಡಿರಿ. ಅವರ ಹಕ್ಕುಗಳನ್ನು ಈಡೇರಿಸುವ ನಾಯಕರನ್ನು ಅಲ್ಲಾಹನು ಅವರಿಗೆ ನೀಡಲಿ. ಮುಸ್ಲಿಮರು ಒಗ್ಗಟ್ಟಿನಿಂದ ಇರುವುದಾದರೆ ಅವರು ಕಷ್ಟತೆಗಳಿಂದ ಮುಕ್ತಿ ಪಡೆಯಬಹುದಾಗಿದೆ. ಅದೇ ರೀತಿಯಲ್ಲಿ ಸ್ವೀಡನಿನಲ್ಲಿ ಮತ್ತು ಕೆಲವು ಇತರ ದೇಶಗಳಲ್ಲೂ ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ತಪ್ಪು ಕೆಲಸ ಮಾಡುವವರಿಗೆ ಏನು ಬೇಕಾದರೂ ಮಾಡಲು ಅವಕಾಶ ಲಭಿಸಿದೆ. ಈ ನೆಪದಿಂದ ಮುಸ್ಲಿಮರ ಭಾವನೆಯೊಂದಿಗೆ ಆಟವಾಡಿಕೊಂಡು ಅವರಿಗೆ ನೋವು ಉಂಟುಮಾಡುವಂತಹ ಏನಾದರೂ ಕೃತ್ಯಗಳನ್ನು ಅವರು ದಿನಾಲೂ ಮಾಡುತ್ತಿರುತ್ತಾರೆ. ಅಲ್ಲಾಹನೇ ಅವರನ್ನು ಹಿಡಿಗೂಡಲಿ. ಫ್ರಾನ್ಸಿನಲ್ಲೂ ಮುಸ್ಲಿಮರನ್ನು ಕಷ್ಟತೆಗಳಿಗೆ ಗುರಿಪಡಿಸಲಾಗುತ್ತಿದೆ. ಮುಸ್ಲಿಮರು ಕೂಡ ತಪ್ಪಾದ ರೀತಿಯಲ್ಲಿ ಪ್ರತಿಕ್ರಿಯೆ ನಡೆಸುತ್ತಿದ್ದಾರೆ. ಮುಸ್ಲಿಮರು ತಮ್ಮ ಕೃತ್ಯಗಳನ್ನು ಇಸ್ಲಾಮಿನ ಪ್ರಕಾರ ಮಾಡುವಾಗಲೇ ಯಶಸ್ಸು ಲಭಿಸುವುದು. ನಾನು ಅನೇಕ ಬಾರಿ ಹೇಳಿದಂತೆ ಲೋಕವು ಬಹಳ ದೊಡ್ಡ ನಾಶದ ಕಡೆಗೆ ಹೋಗುತ್ತಿದೆ. ಅಲ್ಲಾಹನು ಕರುಣೆದೋರಲಿ. ಅದೇ ರೀತಿಯಲ್ಲಿ ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರನ್ನು ಎಲ್ಲ ವಿಧ ಉಪದ್ರಗಳಿಂದ ರಕ್ಷಿಸಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

*At, **'Masjid Mubarak',** Islamabad, Tilford, UK. On 07-07-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon